ಶ್ರೀ ಬಿ.ಹೆಚ್. ಬನ್ನಿಕೋಡ್:- ಕೇಂದ್ರದ ಯೋಜನೆಯನ್ನು ಜಾರಿಗೆ ತರಲು ಒತ್ತಾಯ ಮಾಡಬೇಕು. ರೈತರ ಸಾಲ ಮನ್ನಾ ಮಾಡಲಿಕ್ಕೆ ಇವತ್ತಾದರೂ ಒಪ್ಪಿಕೊಳ್ಳಿ

(ಗೊಂದಲ)

ಶ್ರೀ ಸಿ. ಬೈರೇಗೌಡ:- ನಾನು ಮಾತನಾಡುವಾಗ ಹೇಳಿದೆ...

ಅಧ್ಯಕ್ಷರು:- ಕಾಗೋಡು ತಿಮ್ಮಪ್ಪನವರೇ ತಮಗೆ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ:- ನಾನು ಆಗಲೆ ಸರ್ಕಾರ ಇದರಲ್ಲಿ ಮೊಂಡುತನವನ್ನು ಬಿಡಬೇಕು ಎಂಬ ಮಾತನ್ನು ಹೇಳಿದ್ದೇನೆ. ಈಗ ಸರ್ಕಾರದ ಈ ಮೊಂಡುತನವನ್ನು ಪ್ರತಿಭಟಿಸಿ ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರಾದ ಭೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಹಕ್ಕುಭಾದ್ಯತಾ ನಿರ್ಣಯ ಇದೆ. ಇದರ ಬಗ್ಗೆ ಸೂಚನೆ ಕಳಿಸಿದ್ದೇನೆ..

ಅಧ್ಯಕ್ಷರು:- ತಿಮ್ಮಪ್ಪನವರೆ, ನೀವು ವಾಟಾಳ್ ನಾಗರಾಜ್‌ರವರಿಗೆ ಯೀಲ್ಡ್ ಆಗುತ್ತೀರಾ.

ಒಬ್ಬ ಮಾನ್ಯ ಸದಸ್ಯರು:- ಈಗ ಹೊರಗಡೆ ಹೋಗಿದ್ದರು ಮತ್ತೆ ಬಂದಿದ್ದಾರೆ.

(ಗೊಂದಲ)

ಹಕ್ಕು ಬಾಧ್ಯತಾ ಸೂಚನೆ

ರಾಜ್ಯದಲ್ಲಿ ಕನ್ನಡವನ್ನು ಜಾರಿಗೆ ತರುವ ಬಗ್ಗೆ ಚರ್ಚೆ ನಡೆದಾಗ ಮಾನ್ಯ ಸದಸ್ಯರಾದ ಶ್ರೀ ವಜೀರ್ ಅಹಮದ್‌ರವರು ನಿಂದಿಸಿ ಮಾತನಾಡಿದ ಬಗ್ಗೆ

11.05 ಎ.ಎಂ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ನಿನ್ನೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಇಲಾಖೆಗಳ ಬೇಡಿಕೆಗಳ ಬಗ್ಗೆ ಉತ್ತರವನ್ನು ನೀಡುತ್ತಿರುವಾಗ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅವಕಾಶ ಕೊಡುವ ನೀತಿ ಬಗ್ಗೆ ಅವರು ವಿಚಾರಸರಣಿಯನ್ನು ಸದನದಲ್ಲಿ ಮಂಡಿಸುತ್ತಾ ಇದ್ದರು. ಆ ಸಂದರ್ಭದಲ್ಲಿ ನಾವು ಸರ್ಕಾರದ ನೀತಿ ಕನ್ನಡದ ಮಾಧ್ಯಮದ ಪರವಾಗಿರಬೇಕೇ ಹೊರತು, ಇಂಗ್ಲೀಷ್ ಮಾಧ್ಯಮದ ಪರವಾಗಿ ಇರಬಾರದು ಎನ್ನತಕ್ಕಂಥ ವಾದವನ್ನು ಮಂಡಿಸುವುದಕ್ಕೆ ಈ ಸದನದಲ್ಲಿ ಎದ್ದು ತಮ್ಮ ಗಮನ ಸೆಳೆದು ಮಾತನ್ನು ಪ್ರಾರಂಭಮಾಡಿದಾಗ ಗೊಂದಲ ವಾತಾವರಣ ನಿರ್ಮಾಣವಾಗಿ ಈ ಸಭೆಯ ಬಿನ್ನಿಪೇಟೆ ಕ್ಷೇತ್ರದ ಶಾಸಕರಾದ ನಜೀರ್ ಅಹಮದ್‌ರವರು ಕನ್ನಡದ ಹೋರಾಟ ಹೊಟ್ಟೆಪಾಡಿಗಾಗಿ ಎನ್ನತಕ್ಕಂಥ ಮಾತನ್ನು.....

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರು ಹಕ್ಕು ಬಾಧ್ಯತಾ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯ ಸದಸ್ಯನಾಗಿ ಕೆಲಸ ಮಾಡತಕ್ಕಂಥ ನನ್ನ ಪ್ರತಿಷ್ಠೆಗೆ ಬಹಳ ಕಳಂಕ ತರತಕ್ಕಂಥ ಮಾತನ್ನು ಅವರು ಆಡಿದ್ದಾರೆ. ಇದು ನನ್ನ ಹಕ್ಕಿಗೆ ಚ್ಯುತಿಯಾಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳಿಸುವುದಕ್ಕೆ ಚರ್ಚೆಗೆ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು:- ನೀವು ಕಳಿಸಿರತಕ್ಕ ಸೂಚನೆ ನನಗೆ ಈಗ ತಲುಪಿದೆ. ಅದರ ಬಗ್ಗೆ ನಾನು ನನ್ನ ರೂಲಿಂಗನ್ನು ಈ ದಿವಸ ಕೊಡುತ್ತೇನೆ.

SRI D.B. CHANDRE GOWDA (ವಿರೋಧ ಪಕ್ಷದ ನಾಯಕರು):- Privilege issue proceedes everything else. ನಾನು ಎರಡು ಮಾತನ್ನು ಹೇಳಬೇಕಾಗುತ್ತದೆ. ಏಕೆಂದರೆ, ಈ ಹಕ್ಕುಬಾಧ್ಯತೆ, ಏನಿದೆ you are the custodian of the rights and privileges of the members. ಶಾಸನಸಭೆಯೊಳಗೆ ಚರ್ಚೆ ನಡೆದದ್ದು ಕಡತದಲ್ಲಿಲ್ಲ ಎನ್ನುವ ಕಾರಣಕ್ಕಾಗಿ ಹಕ್ಕು ಬಾಧ್ಯತೆ ಆಗುವುದಿಲ್ಲ ಎಂದು ತಾವು ತೀರ್ಮಾನ ಮಾಡಬಹುದೇನೊ ನನಗೆ ಗೊತ್ತಿಲ್ಲ. ಆದರೆ ಪತ್ರಿಕೆಯಲ್ಲಿ ಬಂದಿದೆ. ಪತ್ರಿಕೆಯಲ್ಲಿ ಬಂದಿರತಕ್ಕದ್ದೆಲ್ಲ ಕಡತದಲ್ಲಿರಬೇಕು ಎಂದಾಗಲಿ, ಕಡತದಲ್ಲಷ್ಟೇ ಪತ್ರಿಕೆಯಲ್ಲಿ ಬರಬೇಕು ಎನ್ನತಕ್ಕಂಥಾದ್ದಾಗಲಿ ನಿಯಮಗಳೇನೂ ಇಲ್ಲ. ಅನೇಕ ಸಾರಿ ನಾವು ಬೆಳಿಗ್ಗೆ ಚರ್ಚೆ ಮಾಡಿರುತ್ತೇವೆ, ಸಾಯಂಕಾಲದ ಹೊತ್ತಿಗೆ ಸಾಯಂಕಾಲದ ಎಡಿಷನ್‌ನಲ್ಲಿ ಆ ವಿಷಯ ಬಂದುಬಿಟ್ಟಿರುತ್ತದೆ. ಆಮೇಲೆ ಅದು ಬರಬಾರದು ಎಂದು ರೂಲಿಂಗ್ ಕೊಡುತ್ತೇವೆ. ಅದು ಪತ್ರಿಕೆಯಲ್ಲಿ ಬಂದಿರುತ್ತದೆ. ಹಾಗೆ ಬಹುಶಃ ನಾನು ಪತ್ರಿಕೆಯವರನ್ನು ದೂರುವುದಿಲ್ಲ. ನಮ್ಮ ಚರ್ಚೆ ಒಂದು ಭಾವನಾತ್ಮಕವಾದ ಚರ್ಚೆ ಎನ್ನುವಂಥ ಭಾಷೆಯನ್ನೂ ತಾವು ಏನು ಬಳಸಿದಿರಿ, ಅಂತಹ ಒಂದು ಭಾವನಾತ್ಮಕ ಸ್ಥಿತಿಯಲ್ಲಿದ್ದಾಗ....

ಅಧ್ಯಕ್ಷರು:- ಭಾವೋದ್ರೇಕ

ಶ್ರೀ ಡಿ. ಬಿ. ಚಂದ್ರೇಗೌಡ:- ಭಾವೋದ್ರೇಕದಲ್ಲಿದ್ದಾಗ.....

ಅಧ್ಯಕ್ಷರು:- ಭಾವನಾತ್ಮಕ ಅಂದರೆ ಕವಿತೆ ಬರೆಯಬಹುದು. ಭಾವೋದ್ರೇಕದಿಂದ ಬಾಯಿಗೆ ಬಂದದ್ದನ್ನು ಹೇಳಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ:- ಅಂಥಾದ್ದು ಹೇಳುವಾಗ ಹೊಟ್ಟೆ ಪಾಡಿಗಾಗಿ ಸದಸ್ಯರು ಇದ್ದಾರೆ ಎನ್ನತಕ್ಕಂಥಾದ್ದು ಬಂದಿದ್ದು ತಮಗೆ ಗೊತ್ತಿದೆ, ಕಡತದಲ್ಲಿಲ್ಲ ತಮಗೆ ಗೊತ್ತಿದೆ. ತಾವು ಗೊತ್ತಿಲ್ಲ ಎಂದು ಹೇಳುವಹಾಗಿಲ್ಲ. ಕಡತದಲ್ಲಿ ಇಲ್ಲದೆ ಇರಬಹುದು. ಈಗ ಏನಾಗುತ್ತದೆ ಎಂದರೆ, ಇಂತಹ ಒಂದು ಭಾಷೆ ಪತ್ರಿಕೆಯಲ್ಲಿ ಬಂದಾಗ ಸದಸ್ಯರ ನಡವಳಿಕೆ ಬಗ್ಗೆ ಸಾರ್ವಜನಿಕರು ಗಂಭೀರವಾಗಿ ಆಲೋಚನೆ ಮಾಡತಕ್ಕಂಥಾದ್ದು ಸಹಜ. ಏಕೆಂದರೆ, ಕಡತದಲ್ಲಿಲ್ಲ ಸದನದ ಒಳಗಡೆ ಏನು ನಡೆಯಿತು ಎನ್ನುವುದು ಸಾರ್ವಜನಿಕರಿಗೆ ಗೊತ್ತಿಲ್ಲ, ಪತ್ರಿಕೆಗಳಿಗೆ ಗೊತ್ತಿಲ್ಲ. ಪತ್ರಿಕೆಗಳಿಗೆ ಗೊತ್ತಿರುವುದು ಇಷ್ಟೆ, ಹೊಟ್ಟಪಾಡಿಗಾಗಿ ಕನ್ನಡದ ಕೆಲಸ ಮಾಡುತ್ತಾರೆ ಎನ್ನುವುದಷ್ಟೇ ಜನರಿಗೆ ಗೊತ್ತಾಗುವುದು. ಇದನ್ನು ಯಾರು ಬಳಸಿದರು ಎನ್ನುವುದೂ ಬಂದಿದೆ. ಆಮೇಲೆ ಏನಾಯಿತು ಎನ್ನುವುದು ಪತ್ರಿಕೆಯಲ್ಲಿ ಬಂದಿಲ್ಲ. ಆದುದರಿಂದ ರಕ್ಷಣೆ ಮಾಡತಕ್ಕಂಥ ಜವಾಬ್ದಾರಿ ತಮಗೆ ಬರುತ್ತದೆ.

ಶ್ರೀ ಕೆ. ಶಿವಮೂರ್ತಿ:- ಚಂದ್ರೇಗೌಡರೆ, ಆದು ಒಂದೇ ಅಲ್ಲ, ಅವಿವೇಕಿಗಳು ಎನ್ನತಕ್ಕಂಥ ಪದವೂ ಬಂದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಆದು ಪತ್ರಿಕೆಯಲ್ಲಿ ಬಂದಿಲ್ಲ.

ಶ್ರೀ ಕೆ. ಶಿವಮೂರ್ತಿ:- ಅವಿವೇಕಿಗಳು ಎನ್ನುವ ಪದ ಕೂಡ ಬಂದಿದೆ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ನನ್ನ ಅಭಿಪ್ರಾಯ ಹೇಳುವುದಕ್ಕೆ ಸ್ವಾತಂತ್ರ್ಯ ಇದೆಯೋ ಇಲ್ಲವೋ, ಅಷ್ಟೆ ನನಗೆ ಬೇಕಾಗಿರುವುದು. ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಸ್ವಾತಂತ್ರ್ಯ ಇದ್ದರೆ ಹೇಳುತ್ತೇನೆ; ಇಲ್ಲ ಅಂದರೆ ಕೂತು ಕೊಳ್ಳುತ್ತೇನೆ. ಬೇರೆಯವರಿಗೆ ತೊಂದರೆಯಾಗಿದ್ದರೆ, ನೋವಾಗಿದ್ದರೆ ಅವರೂ ಕೂಡ ಇಂತಹ ಸೂಚನೆ ತರುವುದಕ್ಕೆ ಈ ಸದನದಲ್ಲಿ ಸಂಪೂರ್ಣವಾದ ಅವಕಾಶ ಇದೆ. In page 194 of 'Parliamentary practice and procedure of Parliament' 3rd Edition, of M.L. Shakdhar and Kaul, it says 'Right of the House to punish the Member for the conduct in Parliament.' Here the conduct of the Member is in question and the publication.

(ಗೊಂದಲ)

ಅಧ್ಯಕ್ಷರು:- ನೀವು ನಿಂತಿದ್ದೀರಲ್ಲ ನಾನು ಏನು ಮಾಡುವುದು. ನೀವು ಕುಳಿತುಕೊಳ್ಳಿ. Your Leader is in possession of the floor. Respect him first. Would you kindly resume your seats? I have not called upon you. ನೀವು ಕೂಡ್ರಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಪತ್ರಿಕೆಯಲ್ಲಿ ಬಂದಿರತಕ್ಕದ್ದು; ಗೌರವಾನ್ವಿತ ಸದಸ್ಯರ ಹಕ್ಕಿಗೆ ಚ್ಯುತಿ ಆಗಿದೆ. ತಾವು ಅವರ ಜವಾಬ್ದಾರಿಯನ್ನು ಹೊತ್ತಿದ್ದೀರಿ. ಅದು ಸದನದಲ್ಲಿ ತೀರ್ಮಾನವಾಗಬೇಕು. ಅದಕ್ಕಾಗಿ ಅವರು ಬರೆಯುತ್ತಾರೆ, ಅದು ಈ ರೀತಿ ಇದೆ.

I quote page 194:

"Each House has a power to punish its Members for disorderly conduct and other contempts committed in the House while it is sitting."

It is sitting.

"This power is vested in the House by virtue of its right to exclusive cognizance of matters arising within the House and "to regulate its own internal concerns."

It has been observed by the Allahabad High Court that "a Legislative assembly would not be able to discharge the high functions entrusted to it properly, if it had no power to punish offenders against breaches of its privileges, to impose disciplinary regulations upon its members or to enforce obedience to its commands".

Again, in a case which related to an action for contempt of court arising out of a speech delivered in the Orissa Legislative Assembly, the Orrisa High Court held that "anything said or done in the House is a matter to be dealt with by the House itself". ಆ ಕಾರಣ ಶಾಸನ ಸಭೆಯಲ್ಲಿ ನಡೆಯಿತು ಎನ್ನತಕ್ಕ ವಿಚಾರ ಪತ್ರಿಕೆಯಲ್ಲಿ ಬಂದು ನಾವು ಶಾಸನ ಸಭೆಯ ಹೊರಗೆ ಕುಳಿತು ನಮಗೆ ಅನುಕೂಲವಾಗುವ ರೀತಿಯಲ್ಲಿ ತೀರ್ಮಾನ ಮಾಡಿದರೆ ಅದು ಪತ್ರಿಕೆಯಲ್ಲಿ ಬರದಿದ್ದರೆ, ಅದು ಆಷ್ಟೂ ಉಳಿಯುತ್ತದೆ. ಆ ಕಾರಣಕ್ಕಾಗಿ ನಾನು ತಮ್ಮಲ್ಲಿ ಮನವಿ ಮಾಡುವುದು ಏನೆಂದರೆ, ಇದನ್ನು ನೇರವಾಗಿ ಹಕ್ಕುಚ್ಯುತಿ ಸಮಿತಿಗಾದರೂ ಕಳುಹಿಸಬಹುದು. ತಾವು ಏನು ತೀರ್ಮಾನ ಮಾಡುತ್ತೀರಿ ನಿಮಗೆ ಬಿಟ್ಟಿದ್ದೇನೆ. ತಮಗೆ ಹಕ್ಕುಚ್ಯುತಿ ಆಗಿದೆಯೆಂದು ಮನಗಂಡರೆ ಸಂಬಂಧ ಪಟ್ಟ ಸದಸ್ಯರುಗಳೊಂದಿಗೆ ಚರ್ಚಿಸಿ ಇಲ್ಲಿಯೇ ತೀರ್ಮಾನ ಮಾಡಬಹುದು. ಸಂಬಂಧಪಟ್ಟ ಸದಸ್ಯರು ಒಳಗೆ ಏನು ಹೇಳಿರುತ್ತಾರೆ, ಅದನ್ನು ಶಾಸನ ಸಭೆಯಲ್ಲಿ ಹೇಳಬಹುದು. ಇಲ್ಲಿ ಮುಗಿಸಬಹುದು. ತಾವು ರೂಲಿಂಗ್ ರಿಸರ್ವ್ ಮಾಡಿದರೆ ಆ ಸಂಖ್ಯೆ ಉಳಿಯುತ್ತೆ, ತಾವು ಏನಾದರೂ ನಿರ್ಣಯ ಕೊಟ್ಟರೆ ಮುಂದೆ ಹೋಗಬಹುದು ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಿವಿಲೇಜ್ ಎತ್ತಿದ್ದು ನೋಡಿ ನನಗೆ ಆಶ್ಚರ್ಯವಾಯಿತು, ಖೇದವೂ ಆಯಿತು. ಏಕೆಂದರೆ, ಅನೇಕ ಸಲ ಅನೇಕ ವಿಚಾರಗಳನ್ನು ನಾವು ನಮ್ಮ ಛೇಂಬರಿನಲ್ಲಿ ಚರ್ಚೆ ಮಾಡುತ್ತೇವೆ. ನಮ್ಮಲ್ಲಿರುವಂಥ ಮನಸ್ತಾಪಗಳು, ಮತಭೇದಗಳು ಈ ಮನೆಯಲ್ಲಿ ಚರ್ಚೆ ಮಾಡಲಾರದೆ ಒಳಗಡೆ ಚರ್ಚೆ ಮಾಡಿಕೊಂಡು ಸಮಾಧಾನದಿಂದ ಬಂದು ಮತ್ತೆ ಸದನದ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ನಿನ್ನೆ ಅಂಥ ಒಂದು ಪ್ರಸಂಗ ನಡೆಯಿತು. ತಮ್ಮ ಛೇಂಬರಿನಲ್ಲಿ ಏನು ಚರ್ಚೆ ನಡೆಯಿತು, ಆದನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ, ಪ್ರಸ್ತಾಪ ಮಾಡಿದರೆ ತಪ್ಪಾಗುತ್ತದೆ. ಆದರೆ, ನಿನ್ನೆ ತಮ್ಮ ಛೇಂಬರ್‌ನಲ್ಲಿ ಚರ್ಚೆ ಮಾಡಿ ಹೊರಗೆ ಬಂದ ಮೇಲೆ ಇಲ್ಲಿ ಯಾವ ಅಪಸ್ವರವೂ ಇಲ್ಲದಂತೆ ಕಾರ್ಯಕಲಾಪಗಳು ಸರಾಗವಾಗಿ ನಡೆದವು.

ಆದರೆ ಇವತ್ತು ಬೆಳಿಗ್ಗೆ ಅವು ಒಂದು ಧೋರಣೆ ತಾಳಿದ್ದು ನೋಡಿ, ನನಗೆ ಏಕೋ ಸ್ವಲ್ಪ ಶಂಕೆ ಬರುತ್ತಿದೆ. ಏಕೆಂದರೆ ಒಂದು ವಿಚಾರ ಸ್ಪಷ್ಟ. ಹೊಟ್ಟೆಪಾಡಿಗಾಗಿ ಬಂಧವರು ಎನ್ನುವಂಥಾದ್ದು ಕಡತದಲ್ಲಿ ಇಲ್ಲ. ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ನಾವೂ ಹೇಳುತ್ತಿದ್ದೇವೆ ಮತ್ತು ಮಾನ್ಯ ವಾಟಾಳ್ ನಾಗರಾಜ್ ಅವರಿಗೂ ಗೊತ್ತಿದೆ ಅದು ಫೈಲ್‌ನಲ್ಲಿ ಇಲ್ಲ. ಮಾನ್ಯ ಸಭಾಧ್ಯಕ್ಷರಿಗೆ ಗೊತ್ತಿದೆ. ಆನೇಕ ಸಲ ಈ ತರಹ ಘಟನೆಗಳು ಆಗುತ್ತವೆ. ಇಲ್ಲಿ ಚರ್ಚೆಯಾಗುವುದೇ ಒಂದು, ಪತ್ರಿಕೆಗಳಲ್ಲಿ ರಿಪೋರ್ಟ್ ಆಗುವುದೇ ಒಂದು; ನಾವು ಏನು ಚರ್ಚೆ ಮಾಡುತ್ತೇವೆ ಅದು ನೂರು ಪರ್‌ಸೆಂಟ್ ಕರೆಕ್ಟ್ ರಿಪೋರ್ಟ್ ಆಗುತ್ತದೆಂದು ಯಾರು ಗ್ಯಾರಂಟಿ ಕೊಡಲಿಕ್ಕೆ ಆಗುವುದಿಲ್ಲ ಮತ್ತು ಆನೇಕ ನಿದರ್ಶನಗಳು ಇವೆ; where the presiding Officer has reprimanded the press for having misquoted or misreported and this one of such cases. ವಾಟಾಳ್ ನಾಗರಾಜ್ ಅವರ ಬಗ್ಗೆ ಯಾವ ಸದಸ್ಯರು ಕೂಡ ಹೊಟ್ಟೆಪಾಡಿಗಾಗಿ ಬಂದವರು ಅಂತ ಅಂದೇ ಇಲ್ಲ, ಎನ್ನವಂತಾದ್ದು ರಿಕಾರ್ಡ್‌ನಲ್ಲಿದ್ದಾಗ, ಯಾವುದಾದರೂ ಒಂದು ಪತ್ರಿಕೆಯವರು ಆ ರೀತಿಯಿಂದ ತಮ್ಮ ಪತ್ರಿಕೆಯಲ್ಲಿ ಪಬ್ಲಿಷ್ ಮಾಡಿದ್ದರೆ ಅವರು ಶಿಕ್ಷೆಗೆ ಗುರಿಯಾಗಬೇಕೆ ಹೊರತು, ಆ ರೀತಿ ಹೇಳಲಾರದವರ ಮೇಲೆ ಒಂದು ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತಾರೆ ಅಂದರೆ ನನಗೆ ಆಶ್ಚರ್ಯವಾಗುತ್ತದೆ. ಹೇಳಲಾರದವರ ಮೇಲೆ ಪ್ರಿವಿಲೇಜ್ ಮೋಷನ್ ಮೂವ್ ಮಾಡುವುದಲ್ಲ, ಪ್ರಿವಿಲೇಜ್ ಮೋಷನ್ ಯಾರ ಮೇಲೆ ಮೂವ್ ಮಾಡಬೇಕು ಅಂದರೆ ಯಾವ ಪತ್ರಿಕೆಯವರು ನಿಮ್ಮ ಬಗ್ಗೆ ಪಬ್ಲಿಷ್ ಮಾಡಿದ್ದಾರೆ ಅವರ ಮೇಲೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಿ ಆಗ ನಿಜವಾದಂಥ ಪ್ರಿವಿಲೇಜ್ ಮೋಷನ್ ಆಗುತ್ತದೆ. ಆದರೆ ಇದು ಆ ರೀತಿ ಆಗಿಲ್ಲ. ನಿನ್ನೆ ನಾವು ಒಳಗಡೆ ಕುಳಿತಾಗ ಇದರ ಬಗ್ಗೆ ಸ್ಪಷ್ಟೀಕರಣವೆಲ್ಲಾ ಆಯಿತು. ನಾವೆಲ್ಲಾ ಸಮಾಧಾನದಿಂದ ಹೊರಗಡೆ ಬಂದಿದ್ದೇವೆ ಅದು ಏನು ಕಡತದಲ್ಲಿದೆಯೇ, ಫೈಲ್‌ನಲ್ಲಿದೆಯೇ, ರೆಕಾರ್ಡ್‌ನಲ್ಲಿದೆಯೇ ಎಂದು ಎಲ್ಲಾ ನೋಡಿದ್ದೇವೆ. ಆದಕ್ಕಾಗಿ ಒಳಗಡೆ ಏನು ನಡೆಯಿತು ಎಂದು ನಾನು ಹೇಳಲಿಕ್ಕೆ ಹೋಗುತ್ತಿಲ್ಲ. ಒಂದು ವೇಳೆ ರೆಕಾರ್ಡ್‌ನಲ್ಲಿ ಇದ್ದಿದ್ದರೆ, ಮಾಡಿದ್ದರೆ, ಮಟ್ಟಿದ್ದರೆ, ಬಹುಶಃ ಹೊರಗೆ ಬಂದಾಗ, ಈ ರೀತಿ ಒಬ್ಬ ಸದಸ್ಯರು ಮಾತನಾಡಿದ್ದಾರೆ ನನಗೆ ಖೇದ ಆಗಿದೆ, ನನಗೆ ಮಾನಹರಣವಾಗಿದೆ, ಬ್ರೀಚ್ ಆಫ್ ಪ್ರಿವಿಲೇಜ್ ಆಗಿದೆ ಎಂದು ನೆನ್ನೆಯೇ ಇಲ್ಲಿ ಎತ್ತಬೇಕಾಗಿತ್ತು ಅಂದರೆ ಯಾವುದೇ ಪ್ರಶ್ನೆ ಇಲ್ಲದಂತೆ, ಎಲ್ಲಾ ಸಮಾಧಾನ ಆದಮೇಲೆ ಇವೊತ್ತು ಮತ್ತೆ ಅದನ್ನು ಕೆದರುವುದಕ್ಕೆ ಹೊರಟಿರುವುದು ಅಂದರೆ ನನಗೆ ಇದರ ಬಗ್ಗೆ ಸ್ವಲ್ಪ ಸಂಶಯ ಬರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಸಭಾನಾಯಕರು, ಪತ್ರಿಕೆಯಲ್ಲಿ ಹಾಗೆ ಬಂದಿದ್ದು ನಾವು ಪ್ರಸ್ತಾಪ ಮಾಡುವುದು ಶಂಕೆಗೆ ಕಾರಣ ಆದರೆ.....

ಶ್ರೀ ವೀರೇಂದ್ರಪಾಟೀಲ್:- ದಯಮಾಡಿ ಕ್ಷಮಿಸಬೇಕು ನಾನು ತಮ್ಮ ಬಗ್ಗೆ ಹೇಳುತ್ತಿಲ್ಲ ತಾವು ಇದನ್ನು ಹೇಳಬಹುದಾಗಿತ್ತು; ವಿರೋಧಪಕ್ಷದ ನಾಯಕರಾಗಿ, ಸಭಾಧ್ಯಕರ ಗಮನಕ್ಕೆ ತರಬಹುದಾಗಿತ್ತು. ನೋಡಿ ಸ್ವಾಮಿ, ನೆನ್ನೆ ನಾವು ಚರ್ಚೆಮಾಡಿದ್ದು ನಿನ್ನೆ ಆಗಿದ್ದು. ಒಂದು ಪತ್ರಿಕೆಯಲ್ಲಿ ಬಂದಿದೇ ಒಂದು ಎಂದು ಹೇಳಬಹುದಾಗಿತ್ತು. ಪತ್ರಿಕೆಯಲ್ಲಿ ಬಂದಿದ್ದರಿಂದ ನಮ್ಮ ಸದಸ್ಯರ ಬಗ್ಗೆ ಜನಾಭಿಪ್ರಾಯ ಈ ರೀತಿ ಬರುತ್ತಿದೆ. ಪತ್ರಿಕೆಯವರು ತಪ್ಪು ಮಾಡಿದ್ದಾರೆ, ಜರ್ನ್‌ಲಿಸ್ಟ್ ಎಥಿಕ್ಸ್ ಏನಿದೆ ಅದರ ವಿರುದ್ಧ ಮಾಡಿದ್ದಾರೆ. ಅದಕ್ಕಾಗಿ ಈ ರೀತಿ ಪಬ್ಲಿಷ್ ಆಗಿರುವುದರಿಂದ ನಮ್ಮ ಸದಸ್ಯರ ಬ್ರೀಚ್ ಆಫ್ ಪ್ರಿವಿಲೇಜ್ ಆಗಿವೆ ಎನ್ನುವಂಥ ಒಂದು ಪ್ರಶ್ನೆ ತಾವು ಎತ್ತಬಹುದಾಗಿತ್ತು. ನಾನು ಅದನ್ನು ಸ್ವಾಗತ ಮಾಡುತ್ತಿದ್ದೆ. ಈಗಲಾದರೂ ವಾಟಾಳ್ ನಾಗರಾಜ್ ಅವರು ಎತ್ತಿದರೆ, ಸ್ವಾಗತ ಮಾಡುತ್ತೇನೆ. ಅವರು ಹಾಗೆ ಮಾಡಿಲ್ಲ, ನಮ್ಮ ಒಬ್ಬ ಸದಸ್ಯರ ಮೇಲೆ ಬ್ರೀಚ್ ಆಫ್ ಪ್ರಿವಿಲೇಜ್ ನೋಟೀಸೇ ಕೊಟ್ಟುಬಿಟ್ಟಿದ್ದಾರೆ. ವಾಟಾಳ್ ನಾಗರಾಜ್ ಅವರ ಲೆಕ್ಕಕ್ಕೆ ನಮ್ಮ ಸದಸ್ಯರು ಅವರ ಬಗ್ಗೆ ಈ ರೀತಿ ಮಾತನಾಡಿದರು ಎಂದು ಇದೆ. ಅದು ಕಡತದಲ್ಲಿ ಇಲ್ಲ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಮತ್ತೆ ಮಾತನಾಡಿದರು ಎಂದು ಬೇರೆ ಬ್ರೀಚ್ ಆಫ್ ಪ್ರಿವಿಲೇಜ್ ತರುತ್ತಾರೆ ಇದು ನನಗೆ ಇನ್‌ಕನ್‌ಸಿಸಟೆಂಟ್, ಕಾಂಟ್ರಡಿಕ್ಟ್‌ನ್ ಇವೊತ್ತು ನಿಮಗೆ ಏನಾದರೂ ಅಸಮಾಧಾನ ಇರಬೇಕಾದರೆ, ಗ್ರೌಸ್ ಇರಬೇಕಾದರೆ ಮತ್ತೆ ಆಗಲಾರದಂಥ ಒಂದು

ಘಟನೆಯ ಬಗ್ಗೆ ಪತ್ರಿಕೆಯವರು ಬರೆದು ನಮ್ಮ ಬಗ್ಗೆ ತಪ್ಪು ಅಭಿಪ್ರಾಯ ಜನರಲ್ಲಿ ಮೂಡುವಂತೆ ಮಾಡಿದ್ದಾರೆ ಎನ್ನುವಂಥ ಗ್ರೌಸೇ ನಮಗೂ ನಿಮಗೂ ಆ ರೀತಿ ಪಬ್ಲಿಷ್ ಮಾಡಿದಂಥ ಪತ್ರಿಕೆಯ ಮೇಲೆ ಇರಬೇಕೆ ಹೊರತು ಯಾರು ಸದಸ್ಯರು ಹೇಳಿ ಇಲ್ಲ ಅವರ ಮೇಲೆ ನೀವು ಪ್ರಿವಿಲೇಜ್ ಮೋಷನ್ ಮೂವ್ಮಾಡುತ್ತೇವೆ ಅಂದರೆ ನನಗಂತೂ ಅರ್ಥವಾಗುತ್ತಿಲ್ಲ. ನಾನು ಕೇಳುತ್ತೇನೆ, ನಿನ್ನೆ ಅವರು ಆ ಪದವನ್ನು ಉಪಯೋಗಮಾಡಿಲ್ಲ ಕಡತದಲ್ಲಿ ಇಲ್ಲ ಎನ್ನುವುದು ವಾಟಾಳ್ ನಾಗರಾಜ್ ಅವರಿಗೆ ಗೊತ್ತಿಲ್ಲವೆ ಅವರು ನಿನ್ನೆ ಆ ರೀತಿಯಿಂದ ಸಮಾಧಾನವಾಗಿ ಹೊರಗಡೆ ಬರಲಿಲ್ಲವೆ. ಆದಮೇಲೆ ನಮ್ಮ ಸದಸ್ಯರ ಮೇಲೆ ಬ್ರೀಚ್ ಆಫ್ ಪ್ರಿವಿಲೇಜ್ ಮೂವ್ ಮಾಡಲಿಕ್ಕೆ ಕಾರಣ ಏನು. ಯಾವ ಪತ್ರಿಕೆಯವರು ಆದನ್ನು ಪಬ್ಲಿಷ್ ಮಾಡಿದ್ದಾರೆ ಆವರ ಮೇಲೆ ಬ್ರೀಚ್ ಆಫ್ ಪ್ರಿವಿಲೇಜ್ ಮೂವ್ ಮಾಡಬೇಕು. ನಿಜವಾಗಿಯೂ ಅವರು ಪ್ರಾಮಾಣಿಕತೆಯಿಂದ ಇದ್ದರೆ, ಇದರ ಬಗ್ಗೆ ಆಸಮಾಧಾನಪಟ್ಟಿದ್ದರೆ, ಮಾನ್ಯ ಸದಸ್ಯರ ಮೇಲೆ ಮೂವ್ ಮಾಡುವುದು ಬಿಟ್ಟು ನಮ್ಮ ಸದಸ್ಯರು ಯಾರು ಹೇಳಿಲ್ಲ ಯಾರು ಆ ಪದ ಉಪಯೋಗಮಾಡಿಲ್ಲ ಯಾವುದು ರೆಕಾರ್ಡ್‌ನಲ್ಲಿ ಇಲ್ಲ ಅವರ ಮೇಲೆ ಮೂವ್ ಮಾಡುತ್ತಾ ಹೋದರೆ ಪ್ರತಿ ದಿನ ಒಬ್ಬರ ಮೇಲೊಬ್ಬರು ಬ್ರೀಚ್ ಆಫ್ ಪ್ರಿವಿಲೇಜ್ ಮೂವ್ ಮಾಡುತ್ತಾ ಹೋಗಬೇಕಾಗುತ್ತದೆ. ಪೇಪರ್ ಆಧಾರದ ಮೇಲೆ ಆ ಸದಸ್ಯರ ಮೇಲೆ ಬ್ರೀಚ್ ಆಫ್ ಪ್ರಿವಿಲೇಜ್ ಮೂವ್ ಮಾಡುತ್ತಾರೆ ಅಂದರೆ ಇದಕ್ಕಿಂತ ದುರದೃಷ್ಟಕರವಾದಂಥ ವಿಚಾರ ಮತ್ತೆ ಯಾವುದೂ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಬೈರೇಗೌಡ:- ಮಾನ್ಯ ಮುಖ್ಯ ಮಂತ್ರಿಗಳು ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂತಹ ಪ್ರಯತ್ನವನ್ನು ಮಾಡಿದ್ದಾರೆ.

(ಗೊಂದಲ)

ಶ್ರೀ ಸಿ.। ಬೈರೇಗೌಡ:- ಅವರಿಗೆ ತೋಚಿದ್ದನ್ನು ಅವರು ಹೇಳುತ್ತಿದ್ದಾರೆ ನಮಗೆ ತೋಚಿದ್ದನ್ನು ನಾನು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ಅವರು ಬ್ರೀಚ್ ಆಫ್ ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದಾರೆ. ನಾನು ಅದರ ಬಗ್ಗೆ ಸ್ವಲ್ಪ ಹೇಳುತ್ತೇನೆ. ಅವರೂ ಇದರ ಬಗ್ಗೆ ಹೇಳಿಯಾಗಿದೆ, ಇವರೂ ಇದರ ಬಗ್ಗೆ ಹೇಳಿಯಾಗಿದೆ. ಇಬ್ಬರೂ ಹೇಳಿಯಾಗಿದೆ.

(ಗೊಂದಲ)

ಶ್ರೀ. ಸಿ.ಬೈರೇಗೌಡ:- ನನಗೆ ಒಂದು ನಿಮಿಷ ಅವಕಾಶ ಕೊಡಿ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್:- ನನ್ನನ್ನು ಕುರಿತು ಹೊಟ್ಟೆ ಪಾಡಿಗಾಗಿ ಕನ್ನಡದ ಬಗ್ಗೆ ಪ್ರಚಾರ ಮಾಡುತ್ತಿದ್ದೀರಿ ಎಂದು ಸದನದಲ್ಲಿ ಬಿನ್ನಪೇಟೆ ಶಾಸಕರು ಹೇಳಿದ್ದಾರೆಂದು ಹೇಳುತ್ತಿದ್ದಾರೆ. ಹಾಗೇ ಕಡತದಲ್ಲಿ ಇಲ್ಲವೆಂದು ಕೂಡ ಹೇಳುತ್ತಿದ್ದಾರೆ. ಇದು ಏನರ್ಥ?

(ಗೊಂದಲ)

ಶ್ರೀ ಸಿ. ಬೈರೇಗೌಡ:- ಅದನ್ನೇ ನಾನು ಹೇಳುವುದಕ್ಕೆ ಹೊರಟಿದ್ದೆ.

(ಗೊಂದಲ)

ಅಧ್ಯಕ್ಷರು:- ಬೈರೇಗೌಡರೇ ತಾವು ಕುಳಿತುಕೊಳ್ಳಿ. ಶಿವಮೂರ್ತಿಯವರೇ ತಮಗೆ ಸ್ವಲ್ಪ ವಿಶ್ರಾಂತಿ ಬೇಕಾಗಿದೆ ತಾವು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೆ, ನಿಮ್ಮ ನೋಟೀಸ್ ಅನ್ನು ನಾನು ನೋಡಿದೆ. ನಿನ್ನೆ ಸದನದ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಂತೆ ದಾಖಲಾತಿಗಳು ನನ್ನ ಹತ್ತಿರ ಇದೆ. ಈ ಸದನದ ಕಾರ್ಯಕಲಾಪಗಳ ದಾಖಲೆಗಳಲ್ಲಿ ಎಲ್ಲಿಯೂ ಕೂಡ ತಾವು ತಮ್ಮ ಹಕ್ಕು ಭಾದ್ಯತಾ ಸೂಚನೆಯಲ್ಲಿ ಏನು ನಮೂದು ಮಾಡಿದ್ದೀರಿ ಅದು ಇಲ್ಲಿ ಕಂಡು ಬರುವುದಿಲ್ಲ. ಜೊತೆಗೆ ಈಗಾಗಲೇ ನಾನು ಒಂದಲ್ಲ ಎರಡು ಸಾರಿ ಈ ಸದನದಲ್ಲಿ ಸದಸ್ಯರು ನಮ್ಮ ಸದನವನ್ನುದ್ದೇಶಿಸಿ ಹೇಗೆ ಮಾತನಾಡಬೇಕೆಂದು ಹೇಳಿದ್ದೇನೆ. ಮತ್ತೊಂದು ಸಲ ನಮ್ಮ ಸದನದ ಕಾರ್ಯ ವಿಧಾನ ಹಾಗೂ ನಡವಳಿಕೆಗಳ 308, 309ನೇ ನಿಯಮಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

"308. ಅಧ್ಯಕ್ಷರಿಂದ ಕರೆ ಬಂದಾಗ ಸದಸ್ಯರು ಮಾತನಾಡುವುದು: ಒಬ್ಬ ಸದಸ್ಯನು ಮಾತನಾಡಲು ಎದ್ದು ನಿಂತರೆ, ಅಧ್ಯಕ್ಷರು ಅವರ ಹೆಸರನ್ನು ಕರೆಯತಕ್ಕದ್ದು. ಒಬ್ಬರಿಗಿಂತ ಹೆಚ್ಚು ಸದಸ್ಯರು ಏಕ ಕಾಲದಲ್ಲಿ ಎದ್ದು ನಿಂತರೆ, ಅಧ್ಯಕ್ಷರು ಹೆಸರು ಕರೆದಿರುವ ಸದಸ್ಯರಿಗೆ ಮಾತನಾಡಲು ಹಕ್ಕಿರುವುದು.

309. ಸದನವನ್ನುದ್ದೇಶಿಸಿ ಮಾತನಾಡುವ ರೀತಿ: ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಒಬ್ಬ ಸದಸ್ಯನು ಯಾವುದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಿಲಿಚ್ಚಿಸಿದರೆ ತನ್ನ ಸ್ಥಳದಿಂದಲೇ ಎದ್ದು ನಿಂತು ಅಧ್ಯಕ್ಷರನ್ನು ಸಂಭೋದಿಸಿ ಮಾತನಾಡತಕ್ಕದ್ದು. ಪರಂತು ಕಾಯಿಲೆ ಅಥವಾ ದುರ್ಬಲತೆಯಿಂದ ನಿಶ್ಶಕ್ತರಾಗಿರುವವರನ್ನು ಕುಳಿತುಕೊಂಡೆ ಮಾತನಾಡಲು ಅನುಮತಿಸಬಹುದು." ಎಂದು ಇದೆ.....

ಶ್ರೀ ವಾಟಾಳ್ ನಾಗರಾಜ್:- ತಾವು ತಮ್ಮ ತೀರ್ಪನ್ನು ಕೊಡುವುದಕ್ಕಿಂತ ಮುಂಚೆ ನನಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:- ನಾನು ತೀರ್ಪು ಕೊಡುತ್ತಿಲ್ಲ; ಅವಕಾಶ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ:- ಈಗ ತಾವು ಸದನದ ನಡವಳಿಕೆಯ ಬಗ್ಗೆ ತಾವು ಹೇಳಿದಿರಿ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಕೆಲವರೆಲ್ಲ ತಮ್ಮ ಮುಂದೆ ಬಂದು ಮಾತನಾಡಿದರು ಅದು ಏನಾಗುತ್ತದೆಂಬುದನ್ನು ವಿಚಾರ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು:- ನಾನು ಅಲ್ಲಿಗೇ ಬರುತ್ತಿದ್ದೆ. ನಮ್ಮ ಮುಂದೆ ಪ್ರಶ್ನೆ ಇರತಕ್ಕಂಥಾದ್ದು ಏನೆಂದರೆ...

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ತಾವು ದಯಮಾಡಿ ಒಂದು ವಿಚಾರದ ಬಗ್ಗೆ ತಿಳುವಳಿಕೆ ಹೇಳಬೇಕು. ಈ ಸದನವನ್ನು ಅಗೌರವವಾಗಿ, ವ್ಯಂಗ್ಯವಾಗಿ ಮಾತನಾಡಿರತಕ್ಕಂಥಾದ್ದರ ಬಗ್ಗೆ ಹಕ್ಕುಚ್ಯುತಿ ನೋಟೀಸನ್ನು ನಾನು ತಮಗೆ ಕಳಿಸಿಕೊಟ್ಟಿದ್ದೇನೆ. ಈ ರೀತಿಯಾಗಿ ಇಡೀ ಸದನಕ್ಕೆ ಅಗೌರವವಾಗಿ ಏನು ಹೇಳಿದ್ದಾರೆ, ರಾಮಕೃಷ್ಣ ಹೆಗಡೆಯವರ ಬಗ್ಗೆ ತಮ್ಮ ಅವಗಾಹನೆಗೆ ತಂದಿದ್ದೇನೆ. ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡಬೇಕು, ತಾವು ಇದರ ಬಗ್ಗೆ ತೀರ್ಮಾನ ಮಾಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

ಶ್ರೀ ಬಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಈ ಸದನದ ಬಗ್ಗೆ ರಾಮಕೃಷ್ಣ ಹೆಗಡೆಯವರು ಏನು ಅಗೌರವವಾಗಿ ಮಾತನಾಡಿದ್ದಾರೆ ಅವರ ಬಗ್ಗೆ ಚರ್ಚೆ ಮಾಡಬೇಕೆಂದು ಮಾನ್ಯ ಶಿವಮೂರ್ತಿಯವರು ಏನು ಕಳಿಸಿದ್ದಾರೆ ಅದರಲ್ಲಿ ನಾನೂ ಕೂಡ ಸಹಿ ಹಾಕಿದ್ದೇನೆ. ಅದರ ಬಗ್ಗೆ ತಮಗೆ ನೋಟೀಸ್ ಕಳಿಸಿದ್ದೇವೆ. ಆದ್ದರಿಂದ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ತಾವು ನಮ್ಮ ರಕ್ಷಣೆಗೆ ಬರಬೇಕು. ಇಡೀ ಸದನವನ್ನು ಅಗೌರವವಾಗಿ.....

ಶ್ರೀ ಸಿ. ಬೈರೇಗೌಡ:- ನಾವು ಇಲ್ಲಿ ಚರ್ಚೆ ಮಾಡುತ್ತಿರತಕ್ಕಂತಹ ವಿಚಾರ ಬೇರೆ ಅವರು ಎತ್ತಿರತಕ್ಕಂತಹ ವಿಚಾರ ಬೇರೆ. ಅವರು ಬೇರೆ ವಿಷಯದ ಬಗ್ಗೆ ಪ್ರತ್ಯೇಕವಾಗಿ ನೋಟೀಸ್ ಕೊಟ್ಟಿದ್ದರೆ ಅದರ ಬಗ್ಗೆ ಅವರು ಪ್ರಸ್ತಾಪ ಮಾಡಲಿ, ಚರ್ಚೆ ಮಾಡಲಿ ಅದಕ್ಕೆ ನನ್ನದು ಅಭ್ಯಂತರವಿಲ್ಲ. ಈ ಸದನದಲ್ಲಿರತಕ್ಕಂತಹ ಸದಸ್ಯರ ಹಕ್ಕಿಗೆ ಚ್ಯುತಿ ಬರತಕ್ಕಂತಹ ರೀತಿಯಲ್ಲಿ ನಡೆದುಕೊಂಡರೆ ಅದನ್ನು ಪಕ್ಷಾತೀತವಾಗಿ ನೋಡಬೇಕಾಗುತ್ತದೆ. ಅವರಿಗೆ ಹಕ್ಕು ಇದೆ, ಅವರು ಪ್ರಸ್ತಾಪ ಮಾಡಲೀ. ತಾವು ಏನು ತೀರ್ಪು ಕೊಡುತ್ತೀರಿ ಆ ವಿಚಾರ ಬೇರೆ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಕಡತದಲ್ಲಿ ಇಲ್ಲವೆಂದು ತಾವು ಹೇಳಿದ್ದೀರಿ. ತಮ್ಮ ಕೋಣೆಯಲ್ಲಿ ಕೂಡ ನಿನ್ನೆ ಚರ್ಚೆ ನಡೆಯಿತು, ಅದನ್ನು ಉಲ್ಲೇಖ ಮಾಡಬಹುದೊ ಇಲ್ಲವೋ ಗೊತ್ತಿಲ್ಲ. ಹೊಟ್ಟೆ ಪಾಡಿಗಾಗಿ ಅನ್ನತಕ್ಕಂತಹ ಪರ ರೆಕಾರ್ಡಿನಲ್ಲಿ ಇಲ್ಲ. ಆದರೆ ಅದು ಇಲ್ಲಿ ನಡೆದಿದೆ. ವೆಲ್‌ನಲ್ಲಿ ನಡೆದಿರತಕ್ಕಂತಹ ವಿಚಾರ ಅದು. ಇದನ್ನು ಕೇಳಿದಂತಹವರು ಸಾಕಷ್ಟು ಜನರು ಇದ್ದಾರೆ. ನಾನೂ ಕೂಡ ಕೇಳಿದ್ದೇನೆ. ಅವರು ಉಪಯೋಗಿಸಿದ, ಬಳಸಿದಂತಹ ಪದವನ್ನು ನಾನೂ ಕೇಳಿದ್ದೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಏತಕ್ಕೆ ಇದು ಪುನಃ ಬರುತ್ತಿದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಕೇಳುತ್ತಿದ್ದಾರೆ.

ಅಧ್ಯಕ್ಷರು:- ಪತ್ರಿಕೆಯಲ್ಲಿ ಬಂದಿರುವುದರಿಂದ ಈಗ ಈ ವಿಚಾರ ಬಂದಿದೆ.

ಶ್ರೀ ಸಿ. ಬೈರೇಗೌಡ:- ಇಲ್ಲಿ ಘಟನೆ ನಡೆದಿರತಕ್ಕದ್ದು ನಿಜ. ಅದನ್ನು ಪತ್ರಿಕೆಯವರು ಬರೆದಿದ್ದಾರೆಯೇ ವಿನಃ ಇಲ್ಲಿ ನಡೆಯದೇ ಇರತಕ್ಕ ವಿಚಾರವನ್ನೇನೂ ಪತ್ರಿಕೆಯವರು ಬರೆದಿಲ್ಲ. ಆದ್ದರಿಂದ ಪತ್ರಿಕೆಯವರ ಮೇಲೆ ಹಕ್ಕುಚ್ಯುತಿ ನಿರ್ಣಯವನ್ನು ತರಬೇಕೆಂದು ಏನು ಸಲಹೆಯನ್ನು ಕೊಡುತ್ತಿದ್ದಾರೆ ಅದು ಸಾಧ್ಯವಿಲ್ಲ. ಆದ್ದರಿಂದಲೇ ನಾನು ಹೇಳಿದ್ದು ಮಾನ್ಯ ಮುಖ್ಯ ಮಂತ್ರಿಯವರು ಈ ಸದನವನ್ನು ತಪ್ಪುದಾರಿಗೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದು. ತಮ್ಮ ಛೇಂಬರ್‌ನಲ್ಲಿ ಅವರು ಕ್ಷಮೆಯನ್ನು ಕೇಳಲಿಲ್ಲವೆ? ತಾವು ಹೇಳಬೇಕು. ಸಂಬಂಧಪಟ್ಟ ಸದಸ್ಯರು ತಮ್ಮ ಛೇಂಬರ್‌ನಲ್ಲಿ ಕ್ಷಮೆಯನ್ನು ಕೇಳಲಿಲ್ಲವೇ?

ಅಧ್ಯಕ್ಷರು:- ನೀವು ಹೇಳುವುದನ್ನು ಹೇಳಿ ಮುಗಿಸಿದಿರಾ?

ಶ್ರೀ ಸಿ. ಬೈರೇಗೌಡ:- ಇದು ಔಟ್ ಆಫ್ ದಿ ರೆಕಾರ್ಡ್ಸ್ ಆದ್ದರಿಂದ ಸೆಟಲಮೆಂಟ್ ಕೂಡ ಔಟ್ ಆಫ್ ದಿ ರೆಕಾರ್ಡ್ ಆಗಿರತಕ್ಕದ್ದು. ಆದ್ದರಿಂದ ಇವತ್ತು ಪತ್ರಿಕೆಯವರ ಮೇಲೆ ಹಕ್ಕು ಚ್ಯುತಿ ನಿರ್ಣಯ ತರಬೇಕೆಂದು ಏನು ಹೇಳುತ್ತಿದ್ದಾರೆ ಅದು ಸಾಧುವಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಿನ್ನೆ ಮಾನ್ಯ ಸಭಾನಾಯಕರು ಮತ್ತು ತಾವು ಮಧ್ಯೆ ಪ್ರವೇಶ ಮಾಡಿ ನಡೆದಂಥ ಘಟನೆಯ ಬಗ್ಗೆ ಕೇವಲ 5 ನಿಮಿಷದಲ್ಲಿ ಪರಸ್ಪರ ಮಾತುಕತೆಯಾಗಿ ಮತ್ತೆ ಸದನದ ಕಾರ್ಯಕಲಾಪ ಪ್ರಾರಂಭವಾಯಿತು. ಕಳೆದ 6 ವರ್ಷಗಳು ನನ್ನ ಅನುಭವದಿಂದ ಹೇಳುತ್ತಿದ್ದೇನೆ, ಅನೇಕ ಸಂದರ್ಭಗಳಲ್ಲಿ ಈ ರೀತಿ ರೆಕಾರ್ಡ್‌ನಲ್ಲಿ ಬರದೇ ಇರತಕ್ಕಂಥ ಅನೇಕ ಅಹಿತಕರ ಘಟನೆಗಳು ನಡೆದಿರತಕ್ಕದ್ದು, ಪತ್ರಿಕೆಗಳಲ್ಲಿ ನೂರಾರು ಬಂದಿವೆ. ಈಗ ಏನಾಗಿದೆಯೆಂದರೆ, ಅವರು ಹೇಳಿದಂಥ ಮಾತು ಪತ್ರಿಕೆಯಲ್ಲಿ ಬಂದಿದೆ, ಕಡತದಲ್ಲಿ ಇಲ್ಲ. ಇಲ್ಲಿ ಯಾರೂ ಕೂಡ ದೊಡ್ಡವರಲ್ಲ. ನಾವು ಆವೇಶದಿಂದ ಇಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ಯಾವುದೋ ಒಂದು ಶಬ್ದ ಪ್ರಯೋಗ ಆಗಾಗ ಸಹಜವಾಗಿ ನಾವು ಕ್ಷಮಾಪಣೆ ಕೇಳುವುದರಿಂದ ನಾವು ದೊಡ್ಡವರಾಗುತ್ತೇವೆಯೇ ಹೊರತು ಯಾವತ್ತೂ ಸಣ್ಣವರಾಗುವುದಿಲ್ಲ. ಆದ್ದರಿಂದ ವಾಟಾಳ್ ನಾಗರಾಜ್‌ರವರ ಬಗ್ಗೆ ಅವರು ಉಪಯೋಗಿಸಿದಂಥ ಶಬ್ದದಿಂದ ಪತ್ರಿಕೆಗಳನ್ನು ಓದಿದಂಥ ಕೋಟ್ಯಾಂತರ ಜನರಿಗೆ ಅಪಾರ್ಥಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಅವರು ಹೇಳಿರತಕ್ಕದ್ದು ನಿಜವಾಗಿರುವುದರಿಂದ ಅವರು ಕ್ಷಮಾಪಣೆ ಕೇಳಿ ಮುಂದಿನ ಕಾರ್ಯಕಲಾಪಗಳಿಗೆ ಅವಕಾಶ ಮಾಡಿಕೊಡುವುದು ಒಳ್ಳೆಯದಲ್ಲವೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಭಾಧ್ಯಕ್ಷರೆ, ನಿನ್ನೆ ತಮ್ಮ ಕಾರ್ಯಾಲಯದಲ್ಲಿ ಏನು ನಡೆಯಿತೆಂಬುದನ್ನು ನಾನು ಇಲ್ಲಿ ಹೇಳುವುದಕ್ಕೆ ತಯಾರಿಲ್ಲ ಏಕೆಂದರೆ, ಅದು ನಡೆಯಬಾರದಿತ್ತು ಎಂದು ಮಾನ್ಯ ಸಭಾ ನಾಯಕರು ಹೇಳಿದ್ದಾರೆ. ಆದ್ದರಿಂದ ನಾನೂ ಕೂಡ ಆ ಒಂದು ತೀರ್ಮಾನಕ್ಕೆ ಬಂದಿದ್ದೇನೆ. ಇವತ್ತು ಈ ಪ್ರಶ್ನೆ ಬರುವುದಕ್ಕೆ ಒಂದು ಕಾರಣ ಇದೆ. ಕಾರಣವಿಲ್ಲದೆ ಈ ಪ್ರಶ್ನೆ ಇಲ್ಲಿ ಬರುವುಕ್ಕೆ ಸಾಧ್ಯವಿಲ್ಲ. ನನ್ನ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಶಂಕೆ ಪಡುತ್ತಿರುವುದು ನನಗೆ ನೋವಾಗುತ್ತಿದೆ. ಅವರು ಏತಕ್ಕೆ ನನ್ನ ಮೇಲೆ ಶಂಕೆ ಪಡುತ್ತಿದ್ದಾರೋ ಗೊತ್ತಿಲ್ಲ. ನನಗೂ ಈಗ ಅವರ ಮೇಲೆ ಶಂಕೆ ಬರುತ್ತಿದೆ. ನನ್ನ ಬಗ್ಗೆ ಅವರು ಯಾವ ರೀತಿ ಶಂಕೆ ಪಡುತ್ತಿದ್ದಾರೋ ಅದೇ ರೀತಿ ನಾನೂ ಕೂಡ ಅವರ ಬಗ್ಗೆ ಶಂಕೆ ಪಡತಕ್ಕ ಪ್ರಸಂಗ ಈಗ ಉದ್ಭವವಾಗಿದೆ. ನನ್ನ ವಿಚಾರದಲ್ಲಿ ಅವರು ಯಾವುದೇ ಸಂದರ್ಭದಲ್ಲೂ ಶಂಕೆ ಪಡಬೇಕಾಗಿಲ್ಲ. ನಾನಾದರೂ ಯಾವುದೇ ಸಂದರ್ಭದಲ್ಲೂ ಯಾರೇ ಮಾನ್ಯ ಸದಸ್ಯರ ಮನಸ್ಸನ್ನು ನೋಯಿಸಬೇಕು ಅಥವಾ ಈ ಸದನದಲ್ಲಿ ಅವರು ಮಾಡಿರತಕ್ಕದ್ದು ದೊಡ್ಡ ಅಪರಾಧ ಎಂದು ಹೇಳುವುದಿಲ್ಲ. ಅವೇಶದಲ್ಲಿ ಬಂದಿರತಕ್ಕ ಮಾತು ಇದು, ನನ್ನಿಂದ ಏನಾದರೂ ಇಂಥ ಮಾತುಗಳು ಈ ಸದನದಲ್ಲಿ ಬಂದಿದ್ದರೆ ಈ ಸದನದಲ್ಲಿ ಈ ಕ್ಷಣವೇ ಕ್ಷಮಾಪಣೆಯನ್ನು ಕೇಳುವುದಕ್ಕೆ ಸಿದ್ಧನಿದ್ದೇನೆ. ತಾವು ಬೇಕಾದರೆ ಹೇಳಿ, ವಾಟಾಳ್ ನಾಗರಾಜ್‌ರವರೇ ನೀವು ಇಂಥ ಪದವನ್ನು ಉಪಯೋಗಿಸಿದ್ದೀರಿ ಎಂದು. ತಾವು ಆ ರೀತಿ ಹೇಳುವುದಾದರೆ ನಾನು ಪ್ರಾಮಾಣಿಕವಾಗಿ ಈ ಸಭೆಯ ಕ್ಷಮಾಪಣೆಯನ್ನು ಕೇಳುವುದಕ್ಕೆ ಶತಃಸಿದ್ಧ, ಇದರಲ್ಲಿ ನಾನು ಹಿಂದುಮುಂದು ನೋಡುವುದಿಲ್ಲ. ನಿನ್ನೆಯೇ ಒಂದು ತೀರ್ಮಾನವಾಗಿ, ಒಂದು ತಿಳಿ ವಾತಾವರಣ ಉಂಟಾಯಿತು. ಆದರೆ ನಾವು ಅದನ್ನು ಹೆಚ್ಚಿಗೆ ಬೆಳೆಸಬಾರದೆಂದು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿ ಒಂದು ತೀರ್ಮಾನಕ್ಕೂ ಬಂದೆವು. ಆದಾದ ಮೇಲೆ ಇವತ್ತು ಎಲ್ಲ ಪತ್ರಿಕೆಗಳ ಮುಖಪುಟದಲ್ಲಿ ಇದು ಬಂದಿದೆ. ಇದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಈಗ ಬಂದಿರತಕ್ಕ ವಿಚಾರ ಏನು? ನಾವು ತಮ್ಮ ಛೇಂಬರ್‌ನಲ್ಲಿ ಏನು ಮಾತುಕತೆ ನಡೆಸಿದೆವು ಎಂಬ ವಿಚಾರ ಯಾವುದೂ ಕೂಡ ಪತ್ರಿಕೆಗಳಲ್ಲಿ ಬಂದಿಲ್ಲ. ನಾವೂ, ನೀವೂ ಏನು ಮಾತನಾಡಿದೆವು, ಮುಖ್ಯ ಮಂತ್ರಿಗಳು ಏನು ಮಾತನಾಡಿದರು, ತಾವು ಏನು ಮಾತನಾಡಿದಿರಿ, ಮಾನ್ಯ ವಿರೋಧಪಕ್ಷದ ನಾಯಕರು ಏನು ಮಾತನಾಡಿದರು, ಮಾನ್ಯ ಸದಸ್ಯರು ಏನು ಮಾತನಾಡಿದರು ಎಂಬುದು ಯಾವುದೂ ಪತ್ರಿಕೆಯಲ್ಲಿ ಬರಲಿಲ್ಲ. ಆದರೆ ಇಲ್ಲಿ ನಡೆದಂಥ ವಿಚಾರ ಪತ್ರಿಕೆಯಲ್ಲಿ ಬಂತು. ಇಲ್ಲಿ ಕುರ್ಚಿಯಲ್ಲಿ ಕುಳಿತು ಮಾತನಾಡಿರಬಹುದು ಅಥವಾ ತಮ್ಮ ಎದುರಿಗೆ ನಿಂತು ಮಾತನಾಡಿರಬಹುದು, ಆದರೆ ಮಾತನಾಡಿದರತಕ್ಕ ಸತ್ಯವನ್ನು ಪತ್ರಿಕೆಯವರು ಹೊರಗೆಳೆದಿದ್ದಾರೆ, ಆದರೆ ಈ ಸಭೆಯಲ್ಲಿ ಯಾವುದೂ ನಡೆದಿಲ್ಲ ಅಂಥಾದ್ದನ್ನು ಪತ್ರಿಕೆಯವರು ಪ್ರಚಾರ ಮಾಡಿದ್ದಾರೆ, ಆದ್ದರಿಂದ ಅವರ ಮೇಲೆ ಹಕ್ಕುಚ್ಯುತಿ ನಿರ್ಣಯವನ್ನು ತೆಗೆದುಕೊಂಡು ಬನ್ನಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳತಕ್ಕ ವಾದವನ್ನು ನಾನಂತೂ ಒಪ್ಪುವುದಿಲ್ಲ.

ಇಲ್ಲಿ ನಡೆದಿರತಕ್ಕಂಥ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇದರಲ್ಲಿ ಅನೇಕ ವಿಚಾರಗಳಲ್ಲಿ ನಮ್ಮ ಕಡತದಲ್ಲಿ ಬಂದಿರತಕ್ಕಂಥದ್ದೇ ಬೇರೆ, ಪತ್ರಿಕೆಗಳಲ್ಲಿ ಬರತಕ್ಕಂಥದ್ದೇ ಬೇರೆ. ಭಾರಿ ಗೊಂದಲ ವೆನ್ನತಕ್ಕಂಥದ್ದು ಪತ್ರಿಕೆಯಲ್ಲಿ ಬಂದರೆ ಈ ಸಭೆಯ ಕಡತದಲ್ಲಿ ಗೊಂದಲವೆಂದು ಬರುತ್ತದೆ. ಭಾರಿ, ಕೂಗಾಟ ಕಿತ್ತಾಟವೆಂದು ಬರೆದಿರತಕ್ಕಂಥ ಒಂದು ಚಿತ್ರ ಕಡತದಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಆ ಚಿತ್ರವನ್ನು ಪತ್ರಿಕೆಯವರು ಯತಾವತ್ತಾಗಿ ವರ್ಣನೆಯಲ್ಲಿ ಕೊಟ್ಟಿದ್ದಾರೆ. ಇದು ನಡೆದಿರತಕ್ಕಂಥದ್ದು ಸತ್ಯ ಪತ್ರಿಕೆಯಲ್ಲಿ ನಡೆದಿರತಕ್ಕಂಥ ವಿಚಾರಗಳು ಬರುವುದಿಲ್ಲ. ನಾವು ಮಾತುಕತೆ ನಡೆಸಿದ್ದೇವೆನ್ನತಕ್ಕಂಥದ್ದು ಪತ್ರಿಕೆಯಲ್ಲಿ ಬಂದಿರುವಾಗ ನನ್ನ 30 ವರ್ಷದ ಜೀವನದಲ್ಲಿ ನನ್ನ ಇಡಿ ಜೀವನದಲ್ಲಿ ನನ್ನ ಉಸಿರೇ ಕನ್ನಡವೆಂದು ಈ ನಾಡಿಗಾಗಿ, ನುಡಿಗಾಗಿ ದುಡಿದಿದ್ದೇನೆ. ಅದನ್ನು ಇಲ್ಲಿ ಕುಳಿತಿರತಕ್ಕಂಥ ನನ್ನ ಮಿತ್ರರು ಓಹೊ ಎನ್ನಬಹುದು, ಆಹಾ ಎನ್ನಬಹುದು. ದೋಲ್

ಬಾರಿಸಬಹುದು ಬಜಾಯಿ ಮಾಡಬಹುದು, ಆದನ್ನು ಯಾರೂ ಒಪ್ಪುವುದಿಲ್ಲ. ಈ ರಾಜ್ಯದ ನಾಲ್ಕು ಕೋಟಿ ಕನ್ನಡ ಜನರು ಈ ಮಾತನ್ನು ಒಪ್ಪುವುದಿಲ್ಲ. ಅವರು ಹೇಳುತ್ತಾರೆ, ಏನು ಬೇಕಾದರೂ ಮಾತನಾಡಲಿ ಅದು ಅವರಿಗೆ ಸೇರಿದ್ದು ಆದರೆ ನಾನು ಇಲ್ಲಿ ಉದ್ದೇಶ ಪೂರ್ವಕವಾಗಿ ಒಬ್ಬ ಸದಸ್ಯರ ಮೇಲೆ ಹೇಳಿದ್ದಲ್ಲ. ಆ ಸದಸ್ಯರು ಬಹಳ ಒಳ್ಳೆಯವರು, ನನಗೆ ಬೇಕಾದವರು. ಅವರ ಮೇಲೆ ವೈಯಕ್ತಿಕವಾಗಿ ನನ್ನ ಆಪಾದನೆಗಳು ಏನು ಇಲ್ಲ. ಆದರೆ ಅವರ ಮಾತು ಇದೆಯಲ್ಲ ಆ ಮಾತು ಇಡೀ ನಾಡಿನ ಜನತೆಯು ಏನು ವಾಟಾಳ್ನಾಗರಾಜ್ ಈ ರೀತಿ ಸಭೆಯ ಸದನದಲ್ಲಿ ಅವರ ಮಾನವನ್ನು ಮರ್ಯಾದೆಯನ್ನು ವ್ಯಕ್ತಿತ್ವವನ್ನು ಕಳೆಯತಕ್ಕಂಥಾದ್ದು ನಡೆದಿದೆ ಎನ್ನುವ ಅಭಿಪ್ರಾಯ ಬರುತ್ತದೆ. ನಿನ್ನೆ ನಾನು ತಮ್ಮ ಮಾತನ್ನು ಒಪ್ಪಿದೆ. ಆದರೆ ಒಂದು, ನನ್ನ ಜೀವಮಾನದಲ್ಲಿ ಈ ಸದನದಲ್ಲಿ ಮುಖ್ಯಮಂತ್ರಿಗಳಾನ್ನಾಗಲಿ, ಇನ್ನೊಬ್ಬರನ್ನಾಗಲಿ ಏಕವಚನದಲ್ಲಿ ಅವಿವೇಕಿ ಎಂದಾಗಲಿ ಅಥವಾ ಇನ್ನು ಯಾವುದೇ ರೀತಿಯಲ್ಲಿ ಕರೆದಿರತಕ್ಕಂಥದ್ದು ಕಡತದಲ್ಲಿ ಇದ್ದರೆ ತಾವು ನೋಡಿ ಸ್ವಾಮಿ, ಸಾರ್ವಜನಿಕವಾಗಿ ಈ ಸಭೆಯಲ್ಲಿ ನಾನು ಕ್ಷಮಾಪಣೆ ಕೇಳುವುದಕ್ಕೆ ಸಿದ್ಧ. ಆದರಲ್ಲೂ ನಾನು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಅಪಾರವಾದ ಗೌರವ ಇಟ್ಟುಕೊಂಡಿರುವಂಥ ಮನುಷ್ಯ. ಅವರ ನಾಯಕತ್ವದ ಬಗ್ಗೆ ಅವರು ಈ ಸಭೆಯಲ್ಲಿ ಇದ್ದಾಗ, ಮಾತನಾಡುವಾಗ ಬಹಳ ಗಾಂಭೀರ್ಯವಾಗಿ ಇರತಕ್ಕಂಥ ಮನುಷ್ಯ, ಗಾಂಭೀರ್ಯದ ಚೌಕಟ್ಟನ್ನು ಬಿಟ್ಟು ನಾನೆಂದೂ ಮಾತನಾಡಲಿಕ್ಕೆ ಹೋಗಿಲ್ಲ. ಆದ್ದರಿಂದ ದಯವಿಟ್ಟು ಈ ಒಂದು ಮಾತು ಪತ್ರಿಕೆಯಲ್ಲಿ ಬಂದಿದೆ. ಪತ್ರಿಕೆಯವರ ಮೇಲೆ ನೀವು ತಾವು ಹಕ್ಕುಭಾದ್ಯತೆಯನ್ನು ತರಬೇಕು, ಹಾಗೆ ಹೀಗೆ ಎಂದು ಹೇಳುವುದಾದರೆ... ಹಾಗಾದರೆ ಈ ಸಮಾಜದಲ್ಲಿ, ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳು ಬರೆಯತಕ್ಕಂಥದ್ದೆಲ್ಲ ಸತ್ಯಕ್ಕೆ ದೂರವಾದುದು, ಸಭೆಯಲ್ಲಿ ನಡೆದಿರತಕ್ಕಂಥದೆಲ್ಲ ಬರೆಯತಕ್ಕಂಥದ್ದಲ್ಲವೆಂದು ಹೇಳುವುದಾದರೆ ಇವರಿಗೆ ಯಾವುದು ಬೇಕೊ ಅದನ್ನೆ ಪತ್ರಿಕೆಯವರು ಬರೆಯಬೇಕೆ ಇವರಿಗೆ ಬೇಕಾದ್ದನ್ನು ಪತ್ರಿಕೆಯವರು ಬರೆದರೆ ಅದು ಸರಿ. ಪತ್ರಿಕೆಗಳ ಬಗ್ಗೆ ಹೇಳುತ್ತೇನೆ, ನನಗೂ ಪತ್ರಿಕೆಗಳ ಮೇಲೆ ಅಸಮಾಧಾನವಿದೆ. ಏತಕ್ಕೆಂದರೆ, ನಿನ್ನೆ ನಡೆದಂಥದ್ದನ್ನು ಒಂದೇ ಒಂದು ಲೈನಿನಲ್ಲಿ ಮುಗಿಸಿದ್ದಾರೆ. ಇಲ್ಲಿ ಏನೇನು ನಡೆಯಿತು ಏನಾಯಿತು ಎನ್ನುವುದನ್ನು ಯಥಾವತ್ತಾಗಿ ಪತ್ರಿಕೆಯಲ್ಲಿ ಬರೆದಿಲ್ಲ. ಒಂದು ಲೈನಿನಲ್ಲಿ ಮುಗಿಸಿದ್ದಾರೆ. ನಿನ್ನೆ ನಡೆದದ್ದು ಕನಿಷ್ಟ ಪಕ್ಷ ಒಂದು ಪುಟ ಬರೆಯುವಷ್ಟಿತ್ತು. ಆದರೆ ಇವರು ಬರೆದದ್ದನ್ನು ನೋಡಿ ನನಗೆ ಸ್ವಲ್ಪ ಅಸಮಾಧಾನವಾಗಿದೆ. ಬೆಳಗ್ಗೆ ಪತ್ರಿಕೆಯನ್ನು ನೋಡಿದೆ ಅದರಲ್ಲಿ ಒಂದು ಅಕ್ಷರವನ್ನು ಸ್ಪಷ್ಟವಾಗಿ ಬರೆದಿದ್ದಾರೆ. ವಾಟಾಳ್ ನಾಗರಾಜ್‌ರವರು "ಕನ್ನಡದ ಹೋರಾಟ ಹೊಟ್ಟಪಾಡಿಗಾಗಿ"....

ಶ್ರೀ ವೀರೇಂದ್ರ ಪಾಟೀಲ್:- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ತಾವು ರೂಲಿಂಗ್ ಕೊಡುವುದಕ್ಕೆ ಪೂರ್ವದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇಂಥ ಘಟನೆಗಳು ಕರ್ನಾಟಕದಲ್ಲಿ ಆಗಿದೆ, ಆಗುತ್ತದೆ, ಅಥವಾ ಎರಡನೇ ಕಡೆಯಲ್ಲಿಲ್ಲವೆನ್ನುವುದಲ್ಲ. ಪಾರ್ಲಿಮೆಂಟ್‌ನಲ್ಲಿಯೂ ಸಹಿತ ಅನೇಕ ಸಲ ಆಗುತ್ತದೆ. ಮತ್ತೆ ಅನೇಕ ಸಲ ಏನಾದರು ಕಹಿ ವಾತಾವರಣ ಬಂದಾಗ ಸ್ಪೀಕರ್‌ರವರು ಎಕ್ಸ್‌ಪಾಂಜ್ ಮಾಡುತ್ತಾರೆ. ಯಾವುದು ಸ್ಪೀಕರ್ ಎಕ್ಸ್‌ಪಾಂಜ್ ಮಾಡುತ್ತಾರೆ ಯಾವುದು ಫೈಲಿನಲ್ಲಿ ರೆಕಾರ್ಡ್‌ನಲ್ಲಿಲ್ಲ ಇವತ್ತು ನಾನು ಸ್ಪಷ್ಟವಾಗಿ ಹೇಳಬೇಕಾದರೆ ಅದು ಪ್ರಸ್‌ನಲ್ಲಿ ಬರತಕ್ಕಂಥದ್ದಲ್ಲ. ಯಾವುದನ್ನು ಎಕ್ಸ್‌ಪಾಂಜ್ ಮಾಡುತ್ತಾರೆ ಅದರ ಪ್ರಶ್ನೆ ಬರುವಂತಿಲ್ಲ. ಆಗ ಪ್ರೆಸ್‌ನವರು ಏನೋ ಮಾತನಾಡಿದರು, ಅದನ್ನು ಸ್ಪೀಕರ್‌ರವರು ಎಕ್ಸ್‌ಪಂಜ್ ಮಾಡಿದರು ಎಂದು ಬರೆಯುತ್ತಾರೆ. ಏನು ಮಾತನಾಡಿದರು, ಏನು ಎಕ್ಸ್‌ಪಾಂಜ್ ಮಾಡಿದರು ಎನ್ನವುದು ಯಾವುದು ಪತ್ರಿಕೆಯಲ್ಲಿ ಬರುವಂತಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದು ಸತ್‌ಸಂಪ್ರದಾಯವನ್ನು ನಾವು ಬೆಳೆಸಿಕೊಳ್ಳಬೇಕಾಗಿದೆ. ಇಲ್ಲಿ ಕುಳಿತು ಮಾತನಾಡಿದಂತದ್ದು ಮಾತ್ರ ಅಸೆಂಬ್ಲಿ ರೆಕಾರ್ಡ್‌ನಲ್ಲಿ ಬರುತ್ತದೆಯೇ ಹೊರತು ವೆಲ್‌ನಲ್ಲಿ ಕುಳಿತು ಮಾತನಾಡತಕ್ಕಂಥದ್ದು ಬರುವಂತೆಯೇ ಇಲ್ಲ. ಏತಕ್ಕೆಂದರೆ ನನಗೆ 18 ವರ್ಷದ್ದು ಜ್ಞಾಪಕ ಇದೆ. ತಮಗೂ ಇರಬಹುದು. ಇಲ್ಲಿ ವೆಲ್‌ನಲ್ಲಿ ಕುಳಿತು ಏನು ಮಾತನಾಡಿದರೂ ಅದು ರೆಕಾರ್ಡ್‌ನಲ್ಲಿ ಬರುವುದಿಲ್ಲ. ಎಲ್ಲಿಯವರೆಗೂ ಈ ಸದನದಲ್ಲಿ

ರಿಕಾರ್ಡ್‌ನಲ್ಲಿ ಇಲ್ಲವೋ ಅಲ್ಲಿಯವರೆಗೂ I fell that the press has no business to publish. It has no business to publish what is happening in the well of the House. ಈಗ ನಾನು ಹೊರಗಡೆ ಹೋಗುತ್ತೇನೆ, ನಾನು ಅವರು ಏನೋ ಹೇಳಿದರೆ, ಏನೋ ಮಾತನಾಡಿದರೆ ಅದೆಲ್ಲ ಪ್ರೆಸ್‌ನಲ್ಲಿ ಬಂದು ಬಿಡುವುದೇ. ಇದೀಗ ನನಗೆ ಬಹಳ ನೋವಾಗುತ್ತದೆ. ಶ್ರೀಘನ್ ಬೈರೇಗೌಡರು ಒಳಗಡೆ ಕ್ಷಮೆ ಕೇಳಿದರು, ಮತ್ತೊಂದು ಕೇಳಿದರು ಎಂದರು ನಾನು ಕೇಳುತ್ತೇನೆ. ಒಳಗಡೆ ಏನೇನು ಮಾತನಾಡಿದ್ದಾರೆ ಅದೆಲ್ಲವನ್ನು ಇಲ್ಲಿ ಮಾತನಾಡಬೇಕೆ? ಇದು ಸತ್ಸಂಪ್ರದಾಯವೇ ಎಂದು ನಾನು ಕೇಳುತ್ತಿದ್ದೇನೆ. ಅದಕ್ಕಾಗಿ ಹೇಳಿದೆ, ನಿನ್ನೆ ಎಲ್ಲಾ ರೀತಿಯಲ್ಲಿ ಮಾತನಾಡಿದ್ದೆ. ಅವರು ನಾವು ಕ್ಷಮೆ ಕೇಳಿದೆವು ಎಂದು ಹೇಳಿದರು. ಯಾರು ಏನೆಂದು ಕ್ಷಮೆ ಕೇಳಿದ್ದಾರೆ? ಅದನ್ನೆಲ್ಲ ಇಲ್ಲಿ ಮಾತನಾಡಬೇಕೆ? ಒಳಗಡೆ ಮಾತನಾಡಿದ್ದು, ಲಾಬಿಯಲ್ಲಿ ಮಾತನಾಡಿದ್ದನ್ನು ಇಲ್ಲಿ ರೆಕಾರ್ಡ್ ಮಾಡಬಾರದೆಂದು ರೂಲಿಂಗ್ ಇದೆ. ಅದಕ್ಕಾಗಿ ಹೇಳುವುದು ಇಲ್ಲಿ ಆವೇಶದಲ್ಲಿ ಬರುತ್ತಾತೆ, ಬಂದಾಗ ಅವರು ಏನೋ ಹೇಳುತ್ತಾರೆ ಇವರು ಏನೋ ಹೇಳುತ್ತಾರೆ ಈಗ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಇವತ್ತು ವಾಟಾಳ್ ನಾಗರಾಜ್ ಅವರು ನಜೀರ್ ಅಹಮದ್‌ರವರು ಈ ರೀತಿ ಹೇಳಿದರು ಎನ್ನುವ ಮಾತನ್ನು ಹೇಳಿದ್ದಾರೆ. ಅವರು ಹೇಳಿದರು, ನಾವು ಕೇಳಿದ್ದೇವೆಂದು. ಅವರು ಹೇಳಲಿಲ್ಲ ಎಂದು ನಾವೆಲ್ಲರೂ ಹೇಳುತ್ತೇವೆ. who is going to decide? unless that is decided what business the press has got to publish it ಆ ರೀತಿ ಮಾತನಾಡಲಿಲ್ಲ ಎಂದು ಹೇಳುತ್ತೇವೆ. ನೀವು ಏನು ಹೇಳುತ್ತೀರಿ, ವಾಟಾಳ್ ನಾಗರಾಜ್ ಹೇಳಿದರು ಎಂದು somebody has to decide....

ಶ್ರೀ ವಾಟಾಳ್ ನಾಗರಾಜ್:- ತಮಗೆ ಹೇಗೆ ಬೇಕೋ ಹಾಗೆ ಮಾತನಾಡಿ. ತಮಗೆ ಏನೇನು ಬರುತ್ತದೆ ಮಾತನಾಡಿ. ನಮ್ಮಿಷ್ಟ ಅಂದಿದ್ದರೂ ಅಂದಿಲ್ಲ ಎಂದು ಹೇಳುತ್ತೇವೆ. ನೀವೇನು ಮಾಡುವುದಕ್ಕಾಗುತ್ತದೆ. ಈ ದಾಟಿಯಲ್ಲಿ ಮಾತನಾಡಿದರೆ ಮಾತನಾಡಿ.

ಶ್ರೀ ವೀರೇಂದ್ರ ಪಾಟೀಲ್:- ವಾಟಾಳ್ ನಾಗರಾಜ್ ಅವರು ನಾನು ಯಾವ ಗಹನವಾದ ಪ್ರಶ್ನೆಯ ಬಗ್ಗೆ ಮಾತನಾಡುತ್ತಿದ್ದೇನೆ, ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಪ್ರೆಸ್‌ನಲ್ಲಿ, ಈ ಸದನದಲ್ಲಿ ನಡೆಯುವಂತಹ ಕಾರ್ಯಕಲಾಪಗಳು ಯಾವುದು ಪಬ್ಲಿಷ್ ಆಗಬೇಕು ಮತ್ತು ಯಾವುದು ಸದನದ ಕಾರ್ಯ ಕಲಾಪಗಳಾಗುತ್ತವೆ, ಯಾವುದು ಸದನದ ಕಾರ್ಯಕಲಾಪಗಳು ಆಗುವ ಹಾಗೆ ಇಲ್ಲವೆಂದು ಪ್ರಿಸೈಡಿಂಗ್ ಆಫೀಸರ್ ನಿರ್ಣಯ ಮಾಡಬೇಕಾಗಿದೆ. ಲಾಬಿಯಲ್ಲಿ ಮಾತನಾಡಿದ್ದು ಪ್ರೆಸ್‌ನಲ್ಲಿ ಬಂತು, ಧರಣಿ ಮಾಡಿಕೊಂಡು ಏನೇನು ಮಾತನಾಡದರೂ ಪ್ರೆಸ್‌ನಲ್ಲಿ ಬರುತ್ತದೆಂದರೆ ಇಲ್ಲಿ ಕುಳಿತು ಮಾತನಾಡಬೇಕೆಂದು ಬರುವ ಅವಶ್ಯಕತೆ ಇಲ್ಲ. ಇದನ್ನೆಲ್ಲ ರೂಲಿಂಗ್‌ನಲ್ಲಿ ನಿರ್ಣಯ ಮಾಡಬೇಕಾಗಿದೆ. ಏಕೆಂದರೆ, ಇಂಥ ಘಟನೆಗಳು ಮುಂದೆ ಆಗಬಹುದು. ಆ ಪ್ರಶ್ನೆಯನ್ನು ನಾನು ಹೇಳುತ್ತಿದ್ದೇನೆ. ಅದನ್ನು ತಾವು ಅರ್ಥ ಮಾಡುತ್ತಿಲ್ಲ. ಪ್ರೆಸ್‌ನಲ್ಲಿ ಏನು ಬರಬೇಕೆಂಬ ಪ್ರಶ್ನೆಯನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಅವರು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ವೀರೇಂದ್ರ ಪಾಟೀಲ್:- ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ಸಭೆಯ ಕಾರ್ಯಕಲಾಪಗಳು ಇನ್ನೂ 4 1/2 ವರ್ಷಗಳವರೆಗೆ ನಡೆಯುತ್ತಾ ಹೋಗುತ್ತವೆ. ಪ್ರಶ್ನೆ ಏನೆಂದರೆ ಇಲ್ಲಿ ನಡೆಯುವ ಕಾರ್ಯಕಲಾಪಗಳು ಎಷ್ಟರಮಟ್ಟಿಗೆ ಪ್ರೆಸ್‌ನಲ್ಲಿ ಬರಬಹುದು, ಯಾವುದು ಬರಬೇಕು, ಯಾವುದು ಬರಬಾರದು ಎನ್ನುವುದನ್ನು ಪ್ರಿಸೈಡಿಂಗ್ ಆಫೀಸರ್ ಏನಿದ್ದಾರೆ ಅವರು ನಿರ್ಣಯಿಸುತ್ತಾರೆ. ಪಾರ್ಲಿಮೆಂಟಿನಲ್ಲಿ ಕೂಡ ಸ್ಪೀಕರ್ ರೂಲಿಂಗ್ ಕೊಟ್ಟಿದ್ದಾರೆ. ಕೆಲವು ಸಾರಿ ಪ್ರೆಸ್‌ನವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಅವರು ಕೂಡ ಕ್ಷಮೆ ಕೇಳಿದ್ದಾರೆ. ನಾನು ಹೇಳುವಂಥಾದ್ದು ಈ ಪ್ರಶ್ನೆಗೆ

ಆಲ್ಲ, ಪ್ರಶ್ನೆ ಏನೆಂದರೆ, ಇಲ್ಲಿ ಚರ್ಚೆ ಮಾಡುವುದು ಪ್ರೆಸ್‌ನಲ್ಲಿ ಯಾವುದು ಬರಬೇಕು, ಯಾವುದು ಬರಬಾರದು, ಈ ಪ್ರಶ್ನೆ ಅಡಕವಾಗಿದೆ, ವಿಚಾರ ಮಾಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು:- ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ವಾಟಾಳ್ ನಾಗರಾಜ್ ಅವರು ಕಳುಹಿಸಿರತಕ್ಕ ಹಕ್ಕುಬಾಧ್ಯತಾ ಸೂಚನೆ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ ಮತ್ತು ಇದರ ಬೌಕಟ್ಟು ಎಷ್ಟು ಮೂಲಭೂತವಾಗಿದೆ ಎಂಬುದರ ಬಗ್ಗೆ ನನ್ನ ಗಮನ ಸೆಳೆದಿದ್ದಾರೆ. ಇದು ಒಬ್ಬ ಸದಸ್ಯರ ವೈಯುಕ್ತಿಕ ಹಕ್ಕುಬಾಧ್ಯತೆಯ ಜೊತೆಗೆ ಈ ಸಭೆಯ ಮರ್ಯಾದೆ ಮತ್ತು ಸಭೆಯ ಕಾರ್ಯಕಲಾಪಗಳನ್ನು ವರದಿ ಮಾಡುವ ಬಗ್ಗೆ ಈ ಸೂಚನೆಯಲ್ಲಿ ಅಡಕವಾಗಿರುವುದರಿಂದ ನಾನು ಸಮಗ್ರವಾಗಿ ಲೋಕಸಭೆಯಲ್ಲಿ ಕೊಟ್ಟರತಕ್ಕ ರೂಲಿಂಗ್ಸ್ ಮತ್ತು ಇದೇ ಸಭೆಯಲ್ಲಿ ಮಾನ್ಯ ಚಂದ್ರೇಗೌಡರು ಏನು ರೂಲಿಂಗ್ಸ್ ಕೊಟ್ಟಿದ್ದಾರೆ, ಎಲ್ಲವನ್ನು ವಿಮರ್ಶೆ ಮಾಡಿ ಅನಂತರ ನಾನು ನನ್ನ ರೂಲಿಂಗ್ ಕೊಡುತ್ತೇನೆ. ಒಂದು ನಿಮಿಷ. ಇದು ಮುಗಿಯಲಿ, ಈಗ ಕಾಗದ ಪತ್ರಗಳನ್ನು ಸಭೆಯ ಮುಂದಿಡುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಡಾ: ಎಚ್.ಆರ್.ರಾಜು:- (ಸಹಕಾರಿ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ 1959ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 130ನೇ ಕಲಮಿನ ಮೇರೆಗೆ 1959ನೇ ಸಾಲಿನ ಸಹಕಾರ ಸಂಘಗಳ ಕಾಯ್ದೆಯ 27(1) ಕಲಂಗೆ ಪರುಂತಕವನ್ನು ಅಳವಡಿಸುವುದಕ್ಕೆ ಸಂಬಂಧಿಸಿದ 1990ನೇ ಜೂನ್ 16ನೇ ದಿನಾಂಕದಂದು ಹೊರಡಿಸಲಾದ ಸಿ.ಎಂ.ಡಬ್ಲ್ಯು 97 ಸಿ.ಎಲ್.ಎಂ. ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ (ಸುಳ್ಯ):- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಕಣಿಯನ್:ಬಿಲ್ಯಾಯ ಪಂಗಡವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ಅರ್ಜಿಯನ್ನೊಪ್ಪಿಸಲಾಯಿತು.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ):- ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯ ಹಲಸಿ ಮಂಡಲ ಪಂಚಾಯಿತಿ ಪ್ರಧಾನರ ಅವ್ಯವಹಾರಗಳ ತನಿಖೆ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪ.....

SRI D.B.CHANDREGOWDA:- On a point of order ಸ್ವಾಮಿ...

ಶ್ರೀ ಡಿ.ಎ. ಚಿನ್ನಪ್ಪ:- ಯಾವುದಕ್ಕೆ ಪಾಯಿಂಟ್ ಆಫ್ ಆರ್ಡರ್? ಅವರು ಏನೂ ಹೇಳೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಚಿನ್ನಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಏತಕ್ಕೆ ಇಷ್ಟು ಆತುರವಾಗಿದ್ದಾರೆ?

ಶ್ರೀ ಡಿ.ಎ. ಚಿನ್ನಪ್ಪ:- ಅವರು ಮಾತನಾಡಲೇ ಇಲ್ಲ.

ಅಧ್ಯಕ್ಷರು:- ಚಂದ್ರೇಗೌಡರೇ ಅವರು ಅಧ್ಯಕ್ಷರೇ ಎಂದು ಹೇಳಲಿ, ಆಮೇಲೆ ನೀವು ಪಾಯಿಂಟ್ ಆಫ್ ಆರ್ಡರ್ ಎತ್ತಿ.